## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 08.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ.ಎಸ್ ಬಿ ಎಸ್ ವಕೀಲರಿಂದಃ**

10. ನಾನು ಬಿಸ್ಲೆರಿ ವ್ಯಾಪಾರ ಮಾಡಿ 30 ಸಾವಿರ ಆದಾಯ ಬರುತ್ತಿತ್ತು ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ. ಆದರೆ ಅವುಗಳು ನನ್ನ ಹತ್ತಿರ ಇವೆ ಇನ್ನೂ ಮುಂದೆ ಹಾಜರಪಡಿಸಿಸುತ್ತೇನೆ. ನಾನು ಬಿಸ್ಲೆರಿ ಡಿಸ್ಟ್ರಿಬ್ಯೂಶನ್ ಏಜೆನ್ಸಿ ಹೊಂದಿದ್ದೇನೆ ಹಾಗೂ ಅದರ ದಾಖಲೆ ನನ್ನ ಹತ್ತಿರ ಇವೆ. ನನ್ನ ಮನೆಯಲ್ಲಿ ದ್ವಿಚಕ್ರ ವಾಹನ ಇದೆ. ಅದನ್ನು ಚಲಾಯಿಸಲು ಚಾಲನಾ ಪರವಾನಿಗೆ ಪತ್ರ ಬೇಕು ಹಾಗೂ ಅದು ನನ್ನ ಹೆಸರಿನಲ್ಲಿ ಇದೆ. ಆದರೆ ಅದು expire ಆಗಿದೆ ಅದನ್ನು renew ಮಾಡಿಸಿಲ್ಲ. ಅಪಘಾತವಾದ ದಿನ ನನ್ನ ಚಾಲನಾ ಪರವಾನಿಗೆ ಪತ್ರ expire ಆಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ನಾನು ಆ ದಿನ ವಾಹನ ಚಾಲನೆ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾದ ಸಮಯದಲ್ಲಿ ನನ್ನ ವಾಹನದ ವಿಮಾ ಪಾಲಿಸಿ ಚಾಲ್ತಿಯಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಅಷ್ಟು ನೆನಪಿಲ್ಲ ಎಂದು ನುಡಿಯುತ್ತಾರೆ. ಎದುರುದಾರ ನಂ.1 ನನಗೆ ಬಹಳ ಪರಿಚಯ ಎಂದರೆ ಸರಿ. ಅವರು ಬೆವರೇಜಸ್ ಕಂಪನಿಯಲ್ಲಿ sales executant ಆಗಿ ಕೆಲಸ ಮಾಡುತ್ತಾರೆ. ಅವರ ಕೆಲಸ ಅವಧಿ ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆಯಾಗಿರುತ್ತದೆ. ಅಪಘಾತವಾದ ದಿನ ಅವರು ತಮ್ಮ ಕೆಲಸದ ಮೇಲೆ ಇದ್ದರು. ಗದಗ ರಸ್ತೆಯಲ್ಲಿರುವ ರೇಲ್ ಸೌಧನಲ್ಲಿರುವ ಕಚೇರಿಗೆ ಹೋಗಿ ವಾಪಸ ಬರುವಾಗ ಅಪಘಾತವಾಗಿರುತ್ತದೆ. ಆ ದಿನ ಮೋಟಾರ್ ಸೈಕಲ್‌ನ್ನು ಎದುರುದಾರ ನಂ.1 ಚಾಲನೆ ಮಾಡುತ್ತಿದ್ದ ಹಾಗೂ ಅದು ಅವರಿಗೆ ಸೇರಿದ್ದು ಇರುತ್ತದೆ. ಘಟನೆಯಾದಾಗ ನಾವು ಮುಂದೆ ಹೋಗುತ್ತಿದ್ದೇವು ಹಾಗೂ ಹಿಂದಿನಿಂದ ಗದಗ ಕಡೆಯಿಂದ ಹುಬ್ಬಳ್ಳಿಗೆ ಕೆ ಎಸ್ ಆರ್ ಟಿ ಸಿ ಬಸ್ ಬರುತ್ತಿತ್ತು ಎಂದರೆ ಸರಿ. ಕೆ ಎಸ್ ಆರ್ ಟಿ ಸಿ ಬಸ್ ಬಂದು ನಮ್ಮ ವಾಹನಕ್ಕೆ ಡಿಕ್ಕಿಪಡಿಸಿರುತ್ತದೆ ಹಾಗೂ ನಮ್ಮ ದ್ವಿಚಕ್ರ ವಾಹನ ಮುಂದಿನ ವಾಹನಕ್ಕೆ ಟಚ್ ಮಾಡಿರುತ್ತದೆ.

11. ಅಪಘಾತವಾದ ನಂತರ ನಾನು ಶ್ರೇಯಸ್ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ಮೊದಲು ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಗೆ ಹೋದ ನಂತರ ಏನು ನಡೆದಿರುತ್ತದೆ ಎಂದು ನಿಮಗೆ ಗೊತ್ತಾಗುತ್ತಿತ್ತು ಎಂದರೆ ಸಾಕ್ಷಿ ಇಲ್ಲ ನನಗೆ ಗೊತ್ತಾಗುತ್ತಿರಲಿಲ್ಲ ಎಂದು ನುಡಿಯುತ್ತಾರೆ.

ಅಪಘಾತ ದಿಃ23/08/2023 ರಂದು ಆಗಿರುತ್ತದೆ. ನಾನು 8 ದಿನಗಳವರೆಗೆ ಶ್ರೇಯಸ್ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಅಪಘಾತದ ಬಗ್ಗೆ ನಾನೇ ಪಿರ್ಯಾದಿ ನೀಡಿರುತ್ತೇನೆ. ಅಪಘಾತವಾದ ಸ್ಥಳದಲ್ಲಿ ಪೊಲೀಸರು ಬಂದಿದ್ದರು ಹಾಗೂ ನಂತರ ನಾನು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಅಲ್ಲಿಗೆ ಸಹ ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ. ಅಪಘಾತದಲ್ಲಿ ನನ್ನ ಬಲಗಾಲಿಗೆ ಗಾಯವಾಗಿರುತ್ತದೆ. ನನಗೆ ಆಸ್ಪತ್ರೆಯಲ್ಲಿ ಎಚ್ಚರ ಬಂದ ನಂತರ ನನಗೆ ಚಿಕಿತ್ಸೆ ಮಾಡುತ್ತಿದ್ದ ವೈದ್ಯರು ನನ್ನ ಕಾಲಿಗೆ ಹೇಗೆ ಗಾಯವಾಯಿತು ಎಂದು ಹೇಳಿಲ್ಲ. ಅದೇ ರೀತಿ ವೈದ್ಯರು ಸಹ ಹೇಗೆ ನನಗೆ ಗಾಯ ಆಯಿತು ಎಂದು ನನ್ನನ್ನು ವಿಚಾರಿಸಲಿಲ್ಲ. ನಾನು ನೀಡಿದ ಪಿರ್ಯಾದಿಯಲ್ಲಿ ಎದುರುದಾರ ನಂ.1 ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದ ಎಂದು ಬರೆಸಿರುತ್ತೇನೆಂದರೆ ಸಾಕ್ಷಿ ಅಷ್ಟು ಇಲ್ಲ ಲಿಮಿಟ್‌ನಲ್ಲಿ ಇತ್ತು ಎಂದು ನುಡಿಯುತ್ತಾರೆ. ವೇಗವಾಗಿ ವಾಹನ ಚಾಲನೆ ಮಾಡಬೇಡ ಎಂದು ಎದುರುದಾರ ನಂ.1 ಇವರಿಗೆ ಹೇಳಬೇಕು ಎಂದು ನಿಮಗೆ ಅನಿಸಲಿಲ್ಲವಾ ಎಂದರೆ ಸಾಕ್ಷಿ ಅನಿಸಲಿಲ್ಲ ಎಂದು ನುಡಿಯುತ್ತಾರೆ. ಎದುರುದಾರ ನಂ.1 ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದಾನೆ ಹಾಗೂ ಸದರಿ ವಾಹನದಿಂದ ಇಳಿಯಬೇಕು ಎಂದು ನಿಮಗೆ ಅನಿಸಲಿಲ್ಲವಾ ಎಂದರೆ ಸಾಕ್ಷಿ ಅವರು ವೇಗವಾಗಿ ವಾಹನ ಚಾಲನೆ ಮಾಡುತ್ತಿರಲಿಲ್ಲ ಎಂದು ನುಡಿಯುತಾತರೆ. ಎದುರುದಾರ ನಂ.1 ವೇಗವಾಗಿ ವಾಹನ ಚಾಲನೆ ಮಾಡುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

12. ಶ್ರೇಯಸ್ ಆಸ್ಪತ್ರೆಯಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಮಾಡಿ ರಾಡ್ ಹಾಕಿರುತ್ತಾರೆ. ನಾನು 8 ದಿನಗಳವರೆಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ನನ್ನನ್ನು ಅಲ್ಲಿಂದ ಬಿಡುಗಡೆ ಮಾಡಿ ಔಷಧಿ ತೆಗೆದುಕೊಳ್ಳಿ ಎಂದು ಹೇಳಿರುತ್ತಾರೆ. ಶ್ರೇಯಸ್ ಆಸ್ಪತ್ರೆಯಲ್ಲಿ ಬಿಡುಗಡೆಯಾದ ನಂತರ ನಾನು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಆದರೆ ಅದೇ ಆಸ್ಪತ್ರೆಯಲ್ಲಿ ನಿರಂತರವಾಗಿ ಫಾಲೋ ಅಪ್ ಚಿಕಿತ್ಸೆ ಪಡೆಯುತ್ತಿದ್ದೇನೆ.ಫಾಲೋ ಅಪ್ ಚಿಕಿತ್ಸೆಗಾಗಿ 7-8 ಬಾರಿ ಹೋಗಿರುವುದನ್ನು ಹೆರುತುಪಪಿಡಿಸಿ ನೀವು ಬೇರೆ ಆಸ್ಪತ್ರೆಯಲ್ಲಿ ಅಥವಾ ಶ್ರೇಯಸ್ ಆಸ್ಪತ್ರೆಯಲ್ಲಿ ಪುನಃ ಚಿಕಿತ್ಸೆ ಪಡೆದಿಲ್ಲ ಎಂದರೆ ಸಾಕ್ಷಿ ನಾನು ಬೇರೆ ಆಸ್ಪತ್ರೆಯಲ್ಲಿ ಸ್ಟೋನ್ ಗಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು ನುಡಿಯುತ್ತಾರೆ. ಆದರೆ ಅಪಘಾತದಲ್ಲಿ ಅದ ಗಾಯದ ವಿಷಯ ವಾಗಿ ಚಿಕಿತ್ಸೆ ಪಡೆದಿಲ್ಲ.

13. ಪ್ರಸ್ತುತ ಅರ್ಜಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ತಯಾರಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಿಮ್ಮ ಅರ್ಜಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಇವತ್ತಿನವರೆಗೂ ನೀವು ಕೆಲಸ ಮಾಡುತ್ತಿರಿ ಎಂದು ಬರೆಸಿರುತ್ತಿರಿ ಎಂದರೆ

ಸಾಕ್ಷಿ ನಾನು ಈಗ ಕೆಲಸ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಕೆಲಸ ಒಂದು ಕಡೆ ಕೂತು ಮಾಡುವ ಕೆಲಸ ಎಂದರೆ ಸರಿಯಲ್ಲ. ಅಪಘಾತದಲ್ಲಿ ಎದುರುದಾರ ನಂ.1 ಇವರಿಗೂ ಸಹ ಗಾಯ ಆಗಿದೆ. ಇನ್ನೊಂದು ಮೋಟಾರ್ ಸೈಕಲ್ ಚಾಲಕನಿಗೆ ಗಾಯ ಆಗಿದೆ ಅಥವಾ ಇಲ್ಲ ಎಂದು ಗೊತ್ತಿಲ್ಲ. ಅಪಘಾತ ಕೆ ಎಸ್ ಆರ್ ಟಿ ಸಿ ಬಸ್ ಹಾಗೂ ನಮ್ಮ ಮುಂದೆ ಹೊರಟಿದ್ದ ಮೋಟಾರ್ ಸೈಕಲ್ ತಪ್ಪಿನಿಂದ ಆಗಿದೆ ಎಂದರೆ ಸರಿ. ಈ ಕಾರಣಕ್ಕಾಗಿ ಸದರಿ ಕೆ ಎಸ್ ಆರ್ ಟಿ ಸಿ ಬಸ್ ಹಾಗೂ ನಮ್ಮ ಮುಂದೆ ಹೊರಟಿದ್ದ ಮೋಟಾರ್ ಸೈಕಲ್ ವಾಹನದ ವಿಮಾ ಕಂಪನಿಯವರು ನನಗೆ ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸರಿ. ನನಗೆ ಸಂಬಂಧ ಇರಲಾರದ ಹಾಗೂ ಸೃಷ್ಟಿಸಿದ ಮೆಡಿಕಲ್ ಬಿಲ್‌ಗಳನ್ನು ಹಾಜರಪಡಿಸಿರುತ್ತೇನೆಂದರೆ ಸರಿಯಲ್ಲ. ನೀವು ಹಾಜರಪಡಿಸಿದ ಬಿಲ್‌ಗಳಲ್ಲಿ ಸೀಲ್ ಅಥವಾ ಸಹಿಗಳು ಇಲ್ಲ ಎಂದರೆ ಸಾಕ್ಷಿ ಅವು ಹಾಸ್ಪಿಟಲ್ ಬಿಲ್ ಗಳು ಎಂದು ನುಡಿಯುತ್ತಾರೆ. ಅಪಘಾತ ಆದ ದಿನ ನಾನು ನನ್ನ ಮೋಟಾಇರ್ ಸೇೖಕಲ್ ನ್ನು ನಾನೇ ಚಲಾಯಿಸಿಕೊಂಡು ಹೋಗುತ್ತಿದ್ದೇನು ಹಾಗೂ ಆ ದಿನ ನನ್ನ ಚಾಲನಾ ಪರವಾನಿಗೆ ಪತ್ರ ನವೀಕರಣಗೊಂಡಿರಲಿಲ್ಲ ಹಾಗೂ ವಿಮಾ ಪಾಲಿಸಿ ಅಸ್ಥಿತ್ವದಲ್ಲಿ ಇರಲಿಲ್ಲ ಹಾಗಾಗಿ ಎದುರುದಾರ ನಂ.1 ನನಗೆ ಆತ್ಮೀಯರು ಹಾಗೂ ಗೊತ್ತಿರುವ ಕಾರಣ ಅವರ ಮೋಟಾರ್ ಸೈಕಲ್‌ನ್ನು ಅಳವಡಿಸಿಕೊಂಡು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಕೆ ಎಸ್ ಆರ್ ಟಿ ಸಿ ಬಸ್ ಚಾಲಕನ ಮೇಲೆ ಸಹ ದೋಷಾರೋಪಣೆಪಟ್ಟಿ ಸಲ್ಲಿಸಿರುತ್ತಾರೆಂದರೆ ಸರಿ. ಎದುರುದಾರ ನಂ.1 ರವರ ವಾಹನಕ್ಕೆ ಇರುವ ಪಾಲಿಸಿಯ ಪ್ರಕಾರ ಪಿಲಿಯನ್ ರೈಡರ್ ಕವರ್ ಆಗುವುದಿಲ್ಲ ಹಾಗಾಗಿ ವಿಮಾ ಕಂಪನಿಯವರು ನನಗೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಎದುರುದಾರ ನಂ.1 ಇವರ ವಾಹನಕ್ಕೆ ಇರುವ ಪಾಲಿಸಿ ಒಂದು ವರ್ಷದ ಅವಧಿಯ ನಂತರ ನವೀಕರಣಗೊಂಡಿರಲಿಲ್ಲ ಹಾಗೂ ಅವರ ಆರ್ ಸಿ ಕಾಪಿ ನವೀಕರಣಗೊಂಡಿರಲಿಲ್ಲ ಹಾಗಾಗಿ ವಿಮಾ ಕಂಪನಿಯವರು ನನಗೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಅಪಘಾತ ಬೇರೆಯವರ ತಪ್ಪಿನಿಂದ ಆದ ಕಾರಣ ಎದುರುದಾರ ನಂ.2 ವಿಮಾ ಕಂಪನಿಯವರು ನನಗೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**

OS– SC – – PW–1 DW–1